# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 505 (569)
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 11.07.2023
ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಹಾಸನ ಜಿಲ್ಲೆ ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಅನುಮೋದನೆಗೊಂಡಿರುವ/ ನಿರ್ಮಿತವಾಗಿರುವ ವಸತಿ ಮತ್ತು ವಾಣಿಜ್ಯ ಬಡಾವಣೆಗಳ ಸಂಖ್ಯೆ ಎಷ್ಟು; ಈವರೆವಿಗೂ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ಭೂ–ಪರಿಹಾರಧನವನ್ನು ಯಾವ ರೀತಿ/ವಿಧದಲ್ಲಿ ಪಾವತಿಸಲಾಗಿದೆ;(ಭೂ ಮಾಲೀಕರ ವಿವರದೊಂದಿಗೆ ವಿವರ ಸಲ್ಲಿಸುವುದು) | ಕಳೆದ 5 ವರ್ಷಗಳಿಂದ ಹಾಸನ ಜಿಲ್ಲೆ, ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ 01 ವಸತಿ ಬಡಾವಣೆ ಯೋಜನೆಗೆ ಅನುಮೋದನೆ ನೀಡಲಾಗಿದ್ದು ವಿವರವು ಈ ಕೆಳಕಂಡಂತಿವೆ.<br><br>ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಬೂವನಹಳ್ಳಿ, ಕೆಂಚಟ್ಟಹಳ್ಳಿ, ಗೇಕರವಳ್ಳಿ ಮತ್ತು ಸಮುದ್ರವಳ್ಳಿ ಗ್ರಾಮಗಳ ವಿವಿಧ ಸ.ನಂ.ಗಳ ಜಮೀನುಗಳ ಭೂಮಾಲೀಕರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ಶೇ.50:50 ರ ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ನಅಇ 44 ಮೈಅಪ್ರಾ 2019(ಇ), ದಿನಾಂಕ:29.10.2022 ರಂದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 19(1) ರನ್ವಯ ಒಟ್ಟು 1145 ಎಕರೆ, 32 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.<br><br>ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ರೈತರ ಸಹಭಾಗಿತ್ವದೊಂದಿಗೆ ಶೇ.50:50ರ ಅನುಪಾತದಲ್ಲಿ ವಸತಿ ಬಡಾವಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 44 ಮೈಅಪ್ರಾ 2019, ದಿನಾಂಕ:02.11.2020 ರಂದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 15(1)(ಬಿ) ರಡಿಯಲ್ಲಿ ಪೂರ್ವಾನುಮತಿ ನೀಡಲಾಗಿದೆ.<br><br>ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಬೂವನಹಳ್ಳಿ, ಕೆಂಚಟ್ಟಹಳ್ಳಿ, ಗೇಕರವಳ್ಳಿ ಮತ್ತು ಸಮುದ್ರವಳ್ಳಿ ಗ್ರಾಮಗಳ ವಿವಿಧ ಸ.ನಂ.ಗಳ ಒಟ್ಟು 1145 ಎಕರೆ, 32 ಗುಂಟೆ ಜಮೀನಲ್ಲಿ ರೂ.990.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಭೂ ಮಾಲೀಕರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ಶೇ. 50:50ರ ಅನುಪಾತದಲ್ಲಿ ವಸತಿ ಬಡಾವಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 44 ಮೈಅಪ್ರಾ 2019, ದಿನಾಂಕ: 05.04.2022 ರಂದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಲಂ 18(3) ರನ್ವಯ |

| | | |
|---|---|---|
| | | ಮಂಜೂರಾತಿ ನೀಡಲಾಗಿದೆ. ಅದರನ್ವಯ ವಸತಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/08/ಟಿಟಿಪಿ/2014, ದಿನಾಂಕ:11.02.2015ರಂತೆ ಶೇ.50:50ರ ಅನುಪಾತದಲ್ಲಿ ರೈತರ ಸಹಭಾಗಿತ್ವದೊಂದಿಗೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭೂಪರಿಹಾರವಾಗಿ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಶೇ.50ರಷ್ಟು ನಿವೇಶನಗಳನ್ನು ಭೂಮಾಲೀಕರಿಗೆ ಹಂಚಿಕೆ ಮಾಡಲಾಗುವುದು. |
| ಆ) | ಕಳೆದ 5 ವರ್ಷಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಹಾಸನದಲ್ಲಿ ವಾರ್ಷಿಕವಾರು ಆಡಿಟ್ ಮಾಡಲಾಗಿದೆಯೇ?(ಹಾಗಿದ್ದಲ್ಲಿ ವಾರ್ಷಿಕವಾರು ವಿವರ ನೀಡುವುದು; | ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಹಾಸನ ಇವರು ಕಳೆದ 05 ವರ್ಷಗಳಲ್ಲಿ ವಾರ್ಷಿಕವಾರು ಆಡಿಟ್ ಮಾಡಲಾಗಿರುವ ವಿವರಗಳು ಈ ಕೆಳಕಂಡಂತಿವೆ. |

**ವಾರ್ಷಿಕವಾರು ಆಡಿಟ್ ವಿವರ**

| ಕ್ರ.ಸಂ. | ವರ್ಷ | ವಿವರ |
|---|---|---|
| 1 | 2018–19 | ಪತ್ರ ಸಂಖ್ಯೆ:ನಅಇ 110 ಮೈಅಪ್ರಾ 2020(ಇ),ದಿನಾಂಕ:15.09.2020ರಂದು ವಿಧಾನಮಂಡಲಕ್ಕೆ ಸಲ್ಲಿಸಲಾಗಿದೆ. |
| 2 | 2019–20 | ಪತ್ರ ಸಂಖ್ಯೆ:ನಅಇ 144 ಮೈಅಪ್ರಾ 2021(ಇ), ದಿನಾಂಕ:24.06.2021ರಂದು ವಿಧಾನಮಂಡಲಕ್ಕೆ ಸಲ್ಲಿಸಲಾಗಿದೆ. |
| 3 | 2020–21 | ಪತ್ರ ಸಂಖ್ಯೆ:ನಅಇ 445 ಮೈಅಪ್ರಾ 2021(ಇ), ದಿನಾಂಕ:11.01.2022ರಂದು ವಿಧಾನಮಂಡಲಕ್ಕೆ ಸಲ್ಲಿಸಲಾಗಿದೆ. |
| 4 | 2021–22 | ಪತ್ರ ಸಂಖ್ಯೆ:ನಅಇ 361 ಮೈಅಪ್ರಾ 2022(ಇ), ದಿನಾಂಕ:28.11.2022ರಂದು ವಿಧಾನಮಂಡಲಕ್ಕೆ ಸಲ್ಲಿಸಲಾಗಿದೆ. |
| 5 | 2022–23 | ಲೆಕ್ಕಪರಿಶೋಧನಾ ವರದಿಯನ್ನು ಆಡಿಟ್ ಮಾಡಲಾಗಿದ್ದು, ಲೆಕ್ಕಪರಿಶೋಧನಾ ಇಲಾಖೆಯಿಂದ ವರದಿ ಸ್ವೀಕೃತವಾದ ನಂತರ ಮಂಡಿಸಲಾಗುವುದು. |

**ಕಡತ ಸಂಖ್ಯೆ: ನಅಇ 185 ಮೈಅಪ್ರಾ 2023**

(ಬಿ.ಎಸ್.ಸುರೇಶ್)
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು.

**ಬಿ.ಎಸ್ ಸುರೇಶ**
**ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**
**(ಕೆಯುಡಬ್ಲ್ಯುಎಸ್‌ಡಿಬಿ ಮತ್ತು ಕೆಯುಐಡಿಎಫ್‌ಡಿ ಸೇರಿದಂತೆ)**